Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

ನಂಬ್ರ 23606/ಲೆಗ್. ಜಿ2/2017/ಕಾನೂನು. *ತಿರುವನಂತಪುರಂ,* *2018 ಮೇ 15,* / *1193 ವೃಷಭ 1/* / *1940 ವೈಶಾಖ 25.*

2018 ಮೇ 14ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಇಲಾಖೆ ಕಾರ್ಯದರ್ಶಿ.*

## 2018ರ 37ನೇ ನಂಬ್ರ ಅಧ್ಯಾದೇಶ

## 2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಬತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

ಕೋಝಿಕೋಡ್ ವಿಶ್ವವಿದ್ಯಾಲಯದ ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆಯನ್ನು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ—2017ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2017ರ 24)ವು 2017 ನವೆಂಬರ್ 20ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ, 2018 ಜನವರಿ 22ನೇ ದಿನಾಂಕದಂದು ಪ್ರಾರಂಭಗೊಂಡು 2018 ಫೆಬ್ರವರಿ 7ನೇ ದಿನಾಂಕದಂದು ಅಂತ್ಯಗೊಂಡ ಕೇರಳ ರಾಜ್ಯ ವಿಧಾನಸಭೆಯ ಅಧಿವೇಶನಕಾಲದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲು ರಾಜ್ಯ ವಿಧಾನಸಭೆಯು ಒಂದು ಅಧಿನಿಯಮವನ್ನು ಜಾರಿಗೆ ತರುವುದಕ್ಕಾಗಿ ಒಂದು ಮಸೂದೆಯನ್ನು ಹದಿನಾಲ್ಕನೇ ಕೇರಳ ವಿಧಾನಸಭೆಯ 99ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಮಂಜೂರು ಮಾಡಲು ಸಾಧ್ಯವಾಗದಿರುವುದರಿಂದಲೂ;

ಹಾಗೂ, ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸಲು 2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2018ರ 15)ವು 2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿರುವುದರಿಂದಲೂ;

ಹಾಗೂ, 2018 ಫೆಬ್ರವರಿ 26ನೇ ದಿನಾಂಕದಂದು ಪ್ರಾರಂಭಗೊಂಡು 2018 ಏಪ್ರಿಲ್ 4ರಂದು ಅಂತ್ಯಗೊಂಡ ಕೇರಳ ರಾಜ್ಯ ವಿಧಾನಸಭೆಯ ಅಧಿವೇಶನಕಾಲದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲಾಗಿ ರಾಜ್ಯ ವಿಧಾನಸಭೆಯು ಒಂದು ಅಧಿನಿಯಮವನ್ನು ಜಾರಿಗೆ

ತರುವುದಕ್ಕಾಗಿ ಒಂದು ಮಸೂದೆಯನ್ನು ಹದಿನಾಲ್ಕನೇ ಕೇರಳ ವಿಧಾನಸಭೆಯ 118ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಮಂಜೂರು ಮಾಡಲು ಸಾಧ್ಯವಾಗದಿರುವುದರಿಂದಲೂ;

ಹಾಗೂ, ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸಲು 2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2018ರ 23)ವು 2018 ಏಪ್ರಿಲ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿರುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ 2ನೇ ಖಂಡದ (2)ನೇ ಉಪಖಂಡದ ಪ್ರಕಾರ ರೂಪೀಕರಿಸಿದ ನಿಕಾಯದ ಕಾಲಾವಧಿಯು 2018 ಮೇ 27ನೇ ದಿನಾಂಕದಂದು ಮುಕ್ತಾಯಗೊಳ್ಳುವುದರಿಂದಲೂ;

ಹಾಗೂ 1975ರ ಕೋಝಿಕೋಡ್ ವಿಶ್ವವಿದ್ಯಾಲಯ ಅಧಿನಿಯಮ (1975ರ 5)ದ ಉಪಬಂಧಗಳಿಗನುಗುಣವಾಗಿ ಸೆನೆಟ್ ಹಾಗೂ ಸಿಂಡಿಕೇಟನ್ನು ಪುನರ್ ರೂಪೀಕರಿಸದಿರುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸದಿದ್ದಲ್ಲಿ ಸಮಸ್ಯೆಗಳು ಉದ್ಭವಿಸುವುದರಿಂದಲೂ;

ಹಾಗೂ, ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸಲು ಹಾಗೂ ಅಧ್ಯಾದೇಶದ ಪ್ರಕಾರ ರೂಪೀಕರಿಸಿದ ನಿಕಾಯದ ಕಾಲಾವಧಿಯನ್ನು ಆರು ತಿಂಗಳುಗಳಿಗೆ ವಿಸ್ತರಿಸಲು ಪ್ರಸ್ತುತ ಅಧ್ಯಾದೇಶವನ್ನು ತಿದ್ದುಪಡಿ ಮಾಡುವುದು ಅಗತ್ಯವಾಗಿರುವುದರಿಂದಲೂ;

ಹಾಗೂ ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಹಾಗೂ ತಾನು ತುರ್ತುಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶಗಳು ಅಸ್ತಿತ್ವದಲ್ಲಿವೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುತ್ತಾರೆ:—

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2018 ಮೇ 28ನೇ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. 2018ರ 23ನೇ ನಂಬ್ರ ಅಧ್ಯಾದೇಶದ ತಿದ್ದುಪಡಿ.—2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2018ರ 23)ದ 2ನೇ ಖಂಡದ (1)ನೇ ಉಪಖಂಡದಲ್ಲಿ "ಆರು ತಿಂಗಳ ಕಾಲಾವಧಿಗೆ" ಎಂಬ ಪದಗಳ ಜಾಗದಲ್ಲಿ "ಹನ್ನೆರಡು ತಿಂಗಳ ಕಾಲಾವಧಿಗೆ" ಎಂಬ ಪದಗಳನ್ನು ಬದಲಿಯಾಗಿ ಸೇರಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.